ರೂಪಾಯಿ ಸಂಪೂರ್ಣವಾಗಿ ಕೊಡುವುದಕ್ಕೆ ಸಾಧ್ಯವಿಲ್ಲ. ಮತ್ತು ಜನರಿಗೂ ಕೂಡ ರಾಜ್ಯಸರ್ಕಾರ ಪ್ರಾಮಾಣಿಕವಾಗಿ ನಮ್ಮ ಪರವಾಗಿ ಆಲೋಚನೆ ಮಾಡುತ್ತಿದೆ ಎಂದು ಗೊತ್ತಾಗಬೇಕು. ಅದಕ್ಕೆ ನಾನು ಹೇಳುವುದೇನೆಂದರೆ ಕೇಂದ್ರ ಸರ್ಕಾರಕ್ಕೆ ಒಂದು ನಿಯೋಗವನ್ನು ತೆಗೆದುಕೊಂಡು ಹೋಗಿ ನೂರು ಕೋಟಿ ರೂಪಾಯಿಗಳು ನಷ್ಟವಾಗಿರಕ್ಕಂತಥ ಸಂದರ್ಭದಲ್ಲಿ ರಾಜ್ಯ ಸರ್ಕಾರ ಒಂದೇ ಎಲ್ಲಾ ನಷ್ಟವನ್ನು ಭರಿಸುವುದಕ್ಕೆ ಸಾಧ್ಯವಿಲ್ಲ. ಕೇಂದ್ರ ಸರ್ಕಾರ ಕೂಡ ಇದರಲ್ಲಿ ಭಾಗಿಯಾಗಬೇಕೆಂದು ಒತ್ತಾಯ ತರುವುದಕ್ಕೆ ಇಡೀ ಸದನದ ಒಂದು ಸದಸ್ಯರ ತಂಡವನ್ನು ಪ್ರಧಾನಮಂತ್ರಿಗಳ ಹತ್ತಿರ ಹೆಚ್ಚಿನ ಪರಿಹಾರವನ್ನು ಪಡೆಯುವುದಕ್ಕೆ ಪ್ರಯತ್ನ ಮಾಡಬೇಕು. ನಾನು ಏಕೆ ಈ ವಿಷಯ ಹೇಳುತ್ತಿದ್ದೇನೆಂದರೆ ಕರ್ನಾಟಕ ರಾಜ್ಯದ ರೈತರಿಗೆ ಕೂಡ ಸರ್ಕಾರದ ಬಗ್ಗೆ ನಂಬಿಕೆ ಬರಬೇಕಾದರೆ ನಮ್ಮ ಪರವಾಗಿ ಸರ್ಕಾರ ಇದೆ ಎನ್ನುವುದಕ್ಕೆ ಈ ಕೆಲಸವನ್ನು ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ಇನ್ನೊಂದು ವಿಚಾರ ಏನು ಹೇಳಿದೆ ಎಂದರೆ ಎರಡನೇ ತಾರೀಖು ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಇದು ಚರ್ಚೆಗೆ ಬರುತ್ತದೆ ಆಗ ಅದರ ನಿಯಮಾವಳಿಗಳನ್ನು ಬದಲಾವಣೆ ಮಾಡಬೇಕು. ಈಗಿರತಕ್ಕಂಥ ನಿಯಮಾವಳಿಗಳನ್ನು ಮುಂದುವರೆಸಿಕೊಂಡು ಹೋದರೆ ಯಾವುದೇ ರೈತರಿಗೆ ಪರಿಹಾರ ಕೊಡುವುದಕ್ಕಾಗುವುದಿಲ್ಲ. ಏಕೆಂದರೆ ಮೂರು ವರ್ಷದ ಆವರೇಜನ್ನು ತೆಗೆದುಕೊಳ್ಳುತ್ತಾರೆ. ಆ ವರ್ಷಕ್ಕೆ ಮಾತ್ರ ತೆಗೆದುಕೊಳ್ಳಬೇಕು ಎಂದು ನಿಯಮಾವಳಿಗಳನ್ನು ತಿದ್ದುಪಡಿ ಮಾಡತಕ್ಕಂಥ ರೀತಿಯಲ್ಲಿ ಕೂಡ ಕ್ಯಾಬಿನೆಟ್‌ನಲ್ಲಿ ತೀರ್ಮಾನ ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತಿದ್ದೇನೆ. ಹಾಗೂ ಒಂದು ಎಕರೆಗೆ 500 ರೂಪಾಯಿ ಪರಿಹಾರ ಎಂದು ಏನು ಹೇಳಿದ್ದಾರೆ, ಅದು ಒಂದು ಸಾವಿರ ರೂಪಾಯಿಯವರೆಗೆ ಹೆಚ್ಚಿಸಬೇಕೆಂದು ನಾನು ಒತ್ತಾಯ ಮಾಡುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ. ಕೆ.ಎನ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಅಧ್ಯಕ್ಷರೇ, ವಿಶೇಷವಾಗಿ ಕರ್ನಾಟಕ ರಾಜ್ಯದಲ್ಲಿ ಈ ವರ್ಷ ರೈತರಿಗೆ ಆಗಿರುವ ನಷ್ಟ ಅದು ಹೇಳುವುದಕ್ಕೆ ಅಸಾಧ್ಯ. ಆದರೆ ನಾನು ಜಂಟಿ ಸದನದ ಸದಸ್ಯನಾಗಿ ಸರ್ಕಾರಕ್ಕೆ ಒಂದು ಮನವಿ ಮಾಡಿಕೊಳ್ಳುವುದೇನೆಂದರೆ ಒಂದು ಸಮಿತಿ ಆದಮೇಲೆ ಪಕ್ಷಾತೀತವಾಗಿ ನಾವೆಲ್ಲಾ ಸೇರಿ ಅತ್ಯಂತ ಗಂಭೀರವಾಗಿ ಚಿಂತನೆ ಮಾಡಿ ಒಂದು ವರದಿಯನ್ನು ಕೊಟ್ಟಿದ್ದೇವೆ. ಆ ವರದಿ ಕೊಟ್ಟು ಸರ್ಕಾರವನ್ನು ಇಕ್ಕಟ್ಟಿಗೆ ಸಿಕ್ಕಿಸುವಂತಹ, ತೊಂದರೆ ಕೊಡುವಂತಹ ಪರಿಸ್ಥಿತಿಯಲ್ಲಿ ನಾವು ಯಾರೂ ಯೋಚನೆ ಮಾಡಿಲ್ಲ. ಆದುದರಿಂದ ಜಂಟಿ ಸದನ ಸಮಿತಿ ಇಷ್ಟೊಂದು ಗಂಭೀರವಾಗಿ ಪರಿಶೀಲನೆ ಮಾಡಿದಂತಹ ವಿಷಯದಲ್ಲಿ ಸರ್ಕಾರ ಅತ್ಯಂತ ಗಂಭೀರವಾಗಿ ಪರಿಗಣಿಸಿ ಸಮಿತಿಯ ಮಧ್ಯಂತರ ವರದಿಯನ್ನು ಪೂರ್ಣವಾಗಿ ಪುರಸ್ಕರಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು : ಈಗ ಒಂದು ಪ್ರಕಟಣೆ ಇದೆ.

ಪ್ರಕಟಣೆ

ಅಧ್ಯಕ್ಷರು : ದಿನಾಂಕ 28ನೇ ಏಪ್ರಿಲ್, 1998ರಂದು ವಿಧಾನ ಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯು ದಿನಾಂಕ 29ನೇ ಏಪ್ರಿಲ್ 1998ರಿಂದ 16ನೇ ಮೇ 1998ರವರೆಗೆ ಈ ಕೆಳಕಂಡಂತೆ ಕಾರ್ಯಕಲಾಪಗಳನ್ನು ನಡೆಸಲು ತೀರ್ಮಾನಿಸಿತು.

29.04.1998 ಬುಧವಾರ 30.04.1998 ಗುರುವಾರ 01.05.1998 ಶುಕ್ರವಾರ 02.05.1998 ಶನಿವಾರ 03.05.1998 ಭಾನುವಾರ 04.05.1998 ಸೋಮವಾರ 05.05.1998 ಮಂಗಳವಾರ	ಉಪವೇಶನವಿರುವುದಿಲ್ಲ.
06.05.1998 ಬುಧವಾರ	1. ಪ್ರಶ್ನೋತ್ತರ 2. 1998-99ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಚರ್ಚೆ
07.05.1998 ಗುರುವಾರ	ರಜಾ ದಿನ
08.05.1998 ಶುಕ್ರವಾರ	1. ಪ್ರಶ್ನೋತ್ತರ 2. 1998-99ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಚರ್ಚೆ 3. ಶಾಸನ ರಚನೆ.
09.05.1998 ಶನಿವಾರ	1. 1998-99ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಚರ್ಚೆ 2. ಶಾಸನ ರಚನೆ
10.05.1998 ಭಾನುವಾರ	ರಜಾ ದಿನ
11.05.1998 ರಿಂದ 15.05.1998	1. ಪ್ರಶ್ನೋತ್ತರ 2. 1998-99ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಚರ್ಚೆ

ರವರೆಗೆ	3. ಶಾಸನ ರಚನೆ
16.06.1998	ಶಾಸನ ರಚನೆ
ಶನಿವಾರ	

ಸಮಿತಿಯು ಈ ಕೆಳಕಂಡ ವಿಧೇಯಕಗಳನ್ನು ಪರ್ಯಾಲೋಚಿಸಲು ಹಾಗೂ ಅಂಗೀಕರಿಸಲು ತೆಗೆದುಕೊಳ್ಳಬೇಕೆಂದು ತೀರ್ಮಾನಿಸಿತು :

ಅ) 1. ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 1995

2. ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ, 1997

3. ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 1997

ಆ) 1. ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ ನಿಯಂತ್ರಣ (ತಿದ್ದುಪಡಿ) ವಿಧೇಯಕ, 1997

2. ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ) (ಎರಡನೇ ತಿದ್ದುಪಡಿ) ವಿಧೇಯಕ, 1997

ಇ) ಕರ್ನಾಟಕ ಹೆದ್ದಾರಿಗಳ (ತಿದ್ದುಪಡಿ) ವಿಧೇಯಕ, 1997

ಈ) ಕರ್ನಾಟಕ ಒಳನಾಡು ಮೀನುಗಾರಿಕೆ (ಸಂರಕ್ಷಣ ಅಭಿವೃದ್ಧಿ ಮತ್ತು ನಿಯಂತ್ರಣ) ವಿಧೇಯಕ, 1996

ಉ) ಕರ್ನಾಟಕ ನ್ಯಾಯಾಲಯ ಫೀಜುಗಳು ಮತ್ತು ದಾವೆಗಳ ಮೌಲ್ಯ ನಿಗದಿ (ತಿದ್ದುಪಡಿ) ವಿಧೇಯಕ, 1998

ಊ) ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕ, 1998

ಈ ಶಿಫಾರಸ್ಸುಗಳನ್ನು ಸದನವು ಅಂಗೀಕರಿಸಿದೆಯೆಂದು ಭಾವಿಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಒಂದು ಮುನ್ಸಿಪಲ್ ಬಿಲ್ .....

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಒಂದು ಕೋ-ಆಪರೇಟೀವ್ ಬಿಲ್...

ಅಧ್ಯಕ್ಷರು : ಅದನ್ನು ಚರ್ಚೆ ಮಾಡಿದ್ದುದು ಆಯಿತು. ಅದನ್ನು ತರಬೇಕೆಂದು ಪ್ರಸ್ತಾಪವಾಯಿತು. ಮಾನ್ಯ ವಿರೋಧ ಪಕ್ಷದ ಮುಖಂಡರು ಬೇರೆ ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ. ಅದನ್ನು ಅನಂತರ ಹೇಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮುನ್ಸಿಪಲ್ ಕಾಯಿದೆ ಒಂದು ಸಣ್ಣ ಬಿಲ್. ಇಂಟ್ರಡ್ಯೂಸ್ ಮಾಡಿ. ಎಂ.ಎಲ್.ಎಗಳನ್ನು ಮೆಂಬರ್ ಮಾಡುವುದಕ್ಕೆ ಒಪ್ಪಿಕೊಂಡಿದ್ದು.

ಅಧ್ಯಕ್ಷರು : ನಾನು ಅದನ್ನು ತೆಗೆದುಕೊಳ್ಳುತ್ತೇನೆ. ಓಟಿಂಗ್ ಪವರ್ ಕೊಡತಕ್ಕಂಥಾದ್ದು. ನಾನು ಮಾನ್ಯ ಮಂತ್ರಿಗಳಿಗೆ ನೆನಪು ಮಾಡಿ ಅದನ್ನು ನಿಮಗೆ ಹೇಳುತ್ತೇನೆ.

ಶ್ರೀ ಎಸ್. ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ,